# ಇಟಲಿಯ ಜಾಜಿ ಮಲ್ಲಿಗೆ!



■ ಪ್ರವೀಣ ಕುಲಕರ್ಣಿ

ಜಗತ್ತಿನ ನೇತಾರರ ಪೈಕಿ ಈಗ ಅತೀ ಹೆಚ್ಚು ಮಿಂಚುತ್ತಿರುವವರಲ್ಲಿ ಇಟಲಿಯ ಪ್ರಧಾನಿ ಜಾರ್ಜಿಯಾ ಮೆಲೊನಿ ತುಂಬಾ ಮುಂಚೂಣಿಯಲ್ಲಿದ್ದಾರೆ. ಅವರ ಚುರುಕಾದ ವ್ಯಕ್ತಿತ್ವ, ವೇಗದ ನಡಿಗೆ, ಎದುರಾಳಿಯನ್ನು ಕಣ್ಣಳತೆಯಲ್ಲೇ ಅಳೆದು ತೂಗಿ ನೋಡಬಲ್ಲ ದೇಹಭಾಷೆ, ನಾಯಕರೊಂದಿಗೆ ಮಾತನಾಡುವಾಗಿನ ಸಣ್ಣ ತುಂಟತನ... ಜಗತ್ತಿನಾದ್ಯಂತ ಅವರ ಕುರಿತು ಕುತೂಹಲವನ್ನು ಹೆಚ್ಚಿಸುವಂತೆ ಮಾಡಿದೆ. ಜಗತ್ತಿನ ಪ್ರಮುಖ ನಾಯಕರೊಂದಿಗೆ ಅವರು ಹೆಜ್ಜೆ ಹಾಕಿದ ದೃಶ್ಯಗಳನ್ನು ಯೂಟ್ಯೂಬ್‌ನಲ್ಲಿ ಲಕ್ಷ ಲಕ್ಷ ಮಂದಿ ವೀಕ್ಷಿಸಿದ್ದಾರೆ. ಈ ನಾಯಕಿಯ ವ್ಯಕ್ತಿತ್ವಕ್ಕೆ ಮಾರುಹೋಗಿದ್ದಾರೆ. ಅಂದಹಾಗೆ, ಜಾರ್ಜಿಯಾ ಅವರು ಇಟಲಿಯ ಮೊದಲ ಮಹಿಳಾ ಪ್ರಧಾನಿ ಎಂಬ ಹಿರಿಮೆಗೂ ಪಾತ್ರರಾಗಿದ್ದಾರೆ. ಜಗತ್ತಿನ ಅತ್ಯಂತ ಪ್ರಭಾವಿ ಮಹಿಳೆಯರಲ್ಲಿ ಒಬ್ಬರಾಗಿಯೂ ಹೆಸರಾಗಿದ್ದಾರೆ.

ನವದೆಹಲಿಯಲ್ಲಿ ನಡೆದ ಜಿ–20 ಶೃಂಗಸಭೆಯಲ್ಲಿ ಪಾಲ್ಗೊಳ್ಳಲು ಬಂದಿದ್ದ ಜಾರ್ಜಿಯಾ, ಇತರ ನಾಯಕರಿಗಿಂತ ಹೆಚ್ಚು ಆಕರ್ಷಣೆಯ ಕೇಂದ್ರಬಿಂದುವಾಗಿದ್ದರು. ಇಟಲಿಯ ಬಲಪಂಥೀಯ ನಾಯಕಿಯಾಗಿ ಗುರ್ತಿಸಿಕೊಂಡವರು. ಭಾರತದ ಪ್ರಧಾನಿ ನರೇಂದ್ರ ಮೋದಿ ಅವರನ್ನು ‘ಡಿಯರ್ ಫ್ರೆಂಡ್’ ಎಂದು ಸಂಬೋಧಿಸುವ ಅವರು, ಗೆಳೆತನದ ಆಹ್ವಾನಕ್ಕೆ ಬೆಲೆ ನೀಡಿ, ಮಾರ್ಚ್‌ನಲ್ಲೂ ಭಾರತಕ್ಕೆ ಬಂದು ಹೋಗಿದ್ದರು. ಜಾರ್ಜಿಯಾ ಅವರು ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸಿ ಇನ್ನು ಒಂದು ವರ್ಷವೂ ಪೂರ್ಣಗೊಂಡಿಲ್ಲ. ಅವರ ಸರ್ಕಾರ ನಿಭಾಯಿಸಿಕೊಂಡು ಬಂದಿರುವ ವಿದೇಶಾಂಗ ನೀತಿ ಭಾರಿ ಮೆಚ್ಚುಗೆಗೆ ಪಾತ್ರವಾಗಿದೆ. ಯೂರೋಪಿನ ಸದಸ್ಯ ರಾಷ್ಟ್ರಗಳಿಗೆ ಸ್ನೇಹದ ಹಸ್ತ ಚಾಚಿರುವ ಅವರು, ಹತ್ತು–ಹಲವು ರಾಷ್ಟ್ರಗಳ ನಾಯಕರಿಗೆ ಆತಿಥ್ಯವನ್ನೂ ವಹಿಸಿದ್ದಾರೆ.

ಬ್ರದರ್ಸ್ ಆಫ್ ಇಟಲಿ ಪಕ್ಷದ ಮುಖ್ಯಸ್ಥೆಯಾಗಿರುವ ಅವರು, ಯೂರೋಪಿಯನ್ ಕನ್ಸರ್ವೇಟಿವ್ಸ್ ಅಂಡ್ ರೆಫಾರ್ಮಿಸ್ಟ್ಸ್ ಪಾರ್ಟಿ ಅಧ್ಯಕ್ಷೆಯಾಗಿಯೂ ಕೆಲಸ ಮಾಡಿದವರು. ರಾಜಕೀಯ ಯಾತ್ರೆಯ ಉದ್ದಕ್ಕೂ ಬಲಪಂಥವನ್ನೇ ಪ್ರತಿಪಾದಿಸುತ್ತಾ ಬಂದವರು. ‘ನಾನೊಬ್ಬ ಕ್ರೈಸ್ತೆ. ಹಾಗೆಯೇ ಸಂಪ್ರದಾಯವಾದಿಯೂ ಹೌದು. ದೇವರು, ಜನ್ಮಭೂಮಿ ಮತ್ತು ಕುಟುಂಬ ಈ ಮೂರೂ ತಮ್ಮ ಆದ್ಯತೆಯ ವಿಷಯಗಳು’ ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಸಲಿಂಗ ಮದುವೆಗಳನ್ನು ಅವರು ಬಲವಾಗಿ ವಿರೋಧಿಸುತ್ತಾರೆ. ನ್ಯಾಟೊ ಸಂಘಟನೆಯ ಪ್ರಬಲ ಬೆಂಬಲಿಗರಾದ ಜಾರ್ಜಿಯಾ, ರಷ್ಯಾದೊಂದಿಗೂ ಒಳ್ಳೆಯ ಸಂಬಂಧವನ್ನು ಬಯಸಿದವರು. ಆದರೆ, ಉಕ್ರೇನ್ ವಿರುದ್ಧ ರಷ್ಯಾ ಯುದ್ಧ ಸಾರಿದ ಮೇಲೆ ಉಕ್ರೇನ್ ಪರವಾಗಿಯೇ ನಿಂತವರು.

ಜಾರ್ಜಿಯಾ ಅವರ ತಂದೆ ತೆರಿಗೆ ಸಲಹೆಗಾರರಾಗಿದ್ದರು. ತಾಯಿ ಕಾದಂಬರಿಗಾರ್ತಿಯಾಗಿದ್ದರು. ತಂದೆ–ತಾಯಿಯ ಗುಣಗಳು ಹದವಾಗಿ ಬೆರೆತಿರುವ ಅವರಲ್ಲಿ ಎಂತಹ ಸನ್ನಿವೇಶವನ್ನೂ ಗೆಲ್ಲಬಲ್ಲೆ ಎನ್ನುವ ಛಾತಿ ಎದ್ದು ಕಾಣುತ್ತದೆ. ಜಾರ್ಜಿಯಾ ಅವರ ಜೀವನಗಾಥೆಯೂ ಒಂದು ಕಾದಂಬರಿಗೆ ಬೇಕಾದಷ್ಟು ವಿಷಯವಸ್ತುವನ್ನು ಹೊಂದಿದೆ. ಜಾರ್ಜಿಯಾ ಅವರ ತಾಯಿಯನ್ನು ತೊರೆದ ತಂದೆ ಎರಡನೇ ಮದುವೆಯಾದಾಗ, ಅವರಿಗೆ ನಾಲ್ವರು ಮಲಸಹೋದರರಾದರು. ಮಾದಕದ್ರವ್ಯ ಕಳ್ಳಸಾಗಣೆಯಲ್ಲಿ ಸಿಕ್ಕಿಬಿದ್ದ ಅವರ ತಂದೆ ಜೈಲುಪಾಲಾಗಿದ್ದರು. 2006ರಿಂದ ಜಾರ್ಜಿಯಾ ತಮ್ಮ ತಂದೆಯ ಸಂಪರ್ಕದಲ್ಲಿಲ್ಲ.

ಕಳೆದ ವರ್ಷ ಪ್ರಧಾನಿ ಹುದ್ದೆಗೇರಿದ ಬಳಿಕ ಅವರು ಮಾಡಿದ ಮೊದಲ ಕೆಲಸವೆಂದರೆ ಇಟಲಿ ಪ್ರವಾಸಕ್ಕೆ ಕೋವಿಡ್–19 ವ್ಯಾಕ್ಸಿನ್ ಹಾಕಿಸಿಕೊಂಡ ಪ್ರಮಾಣಪತ್ರ ಕಡ್ಡಾಯ ಎಂಬ ನಿಯಮವನ್ನು ತೆಗೆದುಹಾಕಿದ್ದು. ಈ ನಿರ್ಧಾರ ವಿದೇಶಿಯರ ಮೆಚ್ಚುಗೆಗೆ ಪಾತ್ರವಾದರೆ, ವಿದ್ಯುತ್ ದರವನ್ನು ತಗ್ಗಿಸುವ ಮೂಲಕ ಸ್ವದೇಶಿಗರ ಮನವನ್ನೂ ಗೆದ್ದವರು ಆಕೆ. ಮಹಿಳೆಯರ ವಿಷಯ ಬಂದಾಗಲೆಲ್ಲ ಸ್ತ್ರೀಸಬಲೀಕರಣದ ಪರವಾಗಿ ಧ್ವನಿ ಎತ್ತಿರುವ ಅವರು ಮಹಿಳಾವಾದಿಯೂ ಹೆಸರಾಗಿದ್ದಾರೆ. ಅಂದಹಾಗೆ, ಜಾರ್ಜಿಯಾ ಅವರು ಬಾಳಸಂಗಾತಿಯಾಗಿ ಹುಡುಕಿಕೊಂಡಿದ್ದು ಆ್ಯಂಡ್ರಿಯಾ ಗ್ಯುಂಬ್ರನೊ ಎಂಬ ಪತ್ರಕರ್ತನನ್ನು.

ಕೇವಲ 46ರ ಹರೆಯದ ಈ ಪ್ರಧಾನಿ, ಯೂರೋಪಿನ ಅತ್ಯಂತ ಪ್ರಭಾವಿ ನಾಯಕಿಯಾಗಿಯೂ ಗುರ್ತಿಸಿಕೊಂಡಿದ್ದಾರೆ. ಬ್ರಿಟನ್ ಪ್ರಧಾನಿ ರಿಷಿ ಸುನಕ್, ಉಕ್ರೇನ್ ಅಧ್ಯಕ್ಷ ವಾಲಾಡಿಮಿರ್ ಝೆಲೆನ್ಸ್ಕಿ, ಫ್ರಾನ್ಸ್ ಅಧ್ಯಕ್ಷ ಇಮ್ಯಾನುಯಲ್ ಮಾರ್ಕನ್ ಅವರೊಂದಿಗೆ ತುಂಬಾ ಆತ್ಮೀಯ ಸಂಬಂಧವನ್ನು ಇಟ್ಟುಕೊಂಡವರು. ಶಿಷ್ಟಾಚಾರ ಬದಿಗೊತ್ತಿ, ಬೇರೆ ದೇಶಗಳ ಪ್ರಧಾನಿಗಳೊಂದಿಗೆ ಬಾಯ್ತುಂಬಾ ನಗುತ್ತಾ ಹರಟೆ ಹೊಡೆಯಬಲ್ಲವರು. ಅಮ್ಮನಂತೆಯೇ ಜಾರ್ಜಿಯಾ ಕೂಡ ಬರಹಗಾರ್ತಿ. ‘ನಾನು ಜಾರ್ಜಿಯಾ’ ಎಂಬ ಆತ್ಮಕಥೆಯನ್ನೂ ಆಕೆ ಬರೆದಿದ್ದಾರೆ. ಬಾಲ್ಯದಲ್ಲಿ ಅವರಿಗೆ ಬೀಚ್ ವಾಲಿಬಾಲ್‌ನಲ್ಲಿ ಪಾಲ್ಗೊಳ್ಳುವುದೆಂದರೆ ಪಂಚಪ್ರಾಣವಾಗಿತ್ತಂತೆ. ಆದರೆ, ‘ಆಗ ಡುಮ್ಮಿಯಾಗಿದ್ದ ಕಾರಣ ಸಹ ಕ್ರೀಡಾಪಟುಗಳು ನನ್ನನ್ನು ಸೇರಿಸಿಕೊಳ್ಳುತ್ತಿರಲಿಲ್ಲ’ ಎಂದು ಆಕೆ ಬರೆಯುತ್ತಾರೆ.

ಕುಟುಂಬ ಪ್ರೇಮಿಯಾದ ಜಾರ್ಜಿಯಾ, ದೇಶದ ಮೇಲೂ ಅಷ್ಟೇ ಪ್ರೀತಿಯ ಮಳೆ ಸುರಿಸುತ್ತಾರೆ. ಧರ್ಮದ ಮೇಲೆ, ಸ್ತ್ರೀ ಅಸ್ಮಿತೆಯ ಮೇಲೆ ಅವರಿಗಿರುವ ಪ್ರೀತಿ–ಕಾಳಜಿಗೆ ಮೇರೆಯೇ ಇಲ್ಲ. ಇಂತಹ ನಾಯಕಿ ಜಗತ್ತಿನ ಯಾವ ಭಾಗಕ್ಕೆ ಹೋದರೂ ಹವಾ ಎಬ್ಬಿಸುತ್ತಿದ್ದಾರೆ. ಮೊನ್ನೆ ಭಾರತಕ್ಕೆ ಬಂದಾಗಲೂ ಜಗತ್ತು ಮತ್ತು ಅವರನ್ನು ಬೆರಗಿನಿಂದ ನೋಡಿದೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65